ಆಲೂಗಡ್ಡೆ ಎಲ್ಲಿಂದ ಬರುವವು?

ಆಲೂಗಡ್ಡೆ ಎಲ್ಲಿಂದ ಬರುವವು?

ಮಿಲ್ಸೆಂಟ್ ಇ ಸೆಲ್ಸಮ್
ಚಿತ್ರಃ ಬೆನ್ ಶೆಕ್ಟರ್
ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಅಂದು ಸ್ಯೂ ಅವಳ ತಾಯಿ ಆಲೂಗಡ್ಡೆಯ ಸಿಪ್ಪೆ ಸುಲಿಯುತ್ತಿದ್ದದ್ದನ್ನು ಕಂಡಳು. " ಅಮ್ಮ, ಆಲೂಗಡ್ಡೆಯಿಂದ ಏನು ಮಾಡುತ್ತಿರುವಿ?" ಸ್ಯೂ ಕೇಳಿದಳು. “ಇಲ್ಲ ಮಗು, ನಾನು ಆಲೂಗಡ್ಡೆಯಿಂದ ಏನೂ ಮಾಡುತ್ತಿಲ್ಲ. ಮನೆಯಲ್ಲಿ ಇನ್ನೂ ಆಲೂಗಡ್ಡೆಗಳಿಲ್ಲ. ನನ್ನ ಸಲುವಾಗಿ ಒಂದಿಷ್ಟು ಆಲೂಗಡ್ಡೆಗಳನ್ನು ಕೊಂಡು ತರುವೆಯಾ?” ಎಂದು ತಾಯಿ ಕೇಳಿದಳು.



ಸ್ಯೂ ತರಕಾರಿ ಅಂಗಡಿಗೆ ಹೋದಳು. “ಒಂದು ಕೇಜಿ ಆಲೂಗಡ್ಡೆ ಕೊಡಿ.” ಅಂಗಡಿಯ ಒಡೆಯನು ತೂಕ ಮಾಡಿ “ತಗೊಳ್ಳಿ” ಎಂದು ಆಲೂಗಡ್ಡೆಗಳನ್ನು ಸ್ಯೂನ ಚೀಲದಲ್ಲಿ ಸುರುವಿದನು.

“ನನ್ನಲ್ಲಿಯ ಆಲೂಗಡ್ಡೆಗಳು ಕೂಡ ಮುಗಿದಿವೆ.” ಎಂದು ಅಂಗಡಿಯ ಒಡೆಯನು ಮೆಲು ದನಿಯಲ್ಲಿ ಹೇಳಿದನು. “ನೀವು ಎಲ್ಲಿಂದ ಆಲೂಗಡ್ಡೆಗಳನ್ನು ತರುವಿರಿ?” ಎಂದು ಸ್ಯೂ ಪ್ರಶ್ನಿಸಿದಳು.

“ನನಗೆ ತೊಂದರೆ ಕೊಡಬೇಡ. ನನಗೆ ಬಹಳ ಕೆಲಸವಿದೆ.” ತರಕಾರಿ ಅಂಗಡಿಯ ಒಡೆಯ ಹೇಳಿದ.

ಸ್ಯೂ ಆಲೂಗಡ್ಡೆ ತಂಬಿದ ಚೀಲವನ್ನು ಕೈಯಲ್ಲಿ ಹಿಡಿದು ಮನೆಕಡೆ ಓಡಿದಳು. ಆದರೆ ಮತ್ತೇ ಅಂಗಡಿಗೆ ತಿರುಗಿ ಬಂದಳು. ಈ ಒಡೆಯ ಕಾಗದದ ಮೇಲೆ ಏನೋ ಬರೆಯುತ್ತಿದ್ದ.



"ಮತ್ತೇ ತಿರುಗಿ ಬಂದೆಯಾ. ಇನ್ನೇನು ಬೇಕಿತ್ತು?" ಒಡೆಯನು ಕೇಳಿದನು. "ನೀವು ಎಲ್ಲಿಂದ ಆಲೂಗಡ್ಡೆಗಳನ್ನು ಕೊಂಡು ತರುವಿರಿ ಎಂಬುದನ್ನು ಹೇಳಿ." ಸ್ಯೂ ಮತ್ತೊಮ್ಮೆ ಕೇಳಿದಳು. "ಸರಿ, ಹೇಳುತ್ತೇನೆ.

ಇಲ್ಲಿ ಬಾ. ನಿನಗೆ ಆಲೂಗಡ್ಡೆ ಎಂಬ ಶಬ್ದ ಬರೆದದ್ದು ಕಾಣುತ್ತದೆಯೇ? ಈ ಶಬ್ದದ ಮುಂದೆ 10 ಬರೆದಿದೆ. ಎಂದರೆ ನನಗೆ ಎಷ್ಟು ಚೀಲ ಆಲೂಗಡ್ಡೆ ನಾಳೆಗೆ ಬೇಕೋ ಅಷ್ಟನ್ನು ಬರೆದಿದ್ದೇನೆ." "ಅಂದರೆ, 500 ಕೇಜಿ ಬೇಕೆ?" ಅಚ್ಚರಿಯಿಂದ ಸ್ಯೂ ನುಡಿದಳು.

“ಉಗ್ರಾಣದಿಂದ ತರುವೆವು. ಅಲ್ಲಿ ಎಲ್ಲ ರೀತಿಯ ತರಕಾರಿಗಳು ಬರುತ್ತವೆ. ನಾನು ಅವರಿಗೆ ಫೋನು ಮಾಡಿ ಆರ್ಡರ ಕೊಡುವೆ.” ಅಂಗಡಿಯ ಒಡೆಯನು ಹೇಳಿದನು. ಆತನು ಫೋನ ಮೇಲೆ ಮಾತನ್ನಾಡಿದ್ದನ್ನು ಸ್ಯೂ ಆಲಿಸಿದಳು. “500 ಕೇಜಿ” “ಆಲೂಗಡ್ಡೆಗಳೇ ಇರಬೇಕು” ಸ್ಯೂಗೆ ತಿಳಿಯಿತು. ಆತನು ಫೋನನ್ನು ಕೆಳಗಿಟ್ಟನು.

“ಇಷ್ಟೊಂದು ಆಲೂಗಡ್ಡೆಯೇ? ಇವು ಎಲ್ಲಿಂದ ಬರುವವು? ” ಸ್ಯೂ ಕೇಳಿದಳು.

“ಉಗ್ರಾಣದಿಂದ ತರಕಾರಿ ಯಾವಾಗ ಬರುತ್ತವೆ?” ಸ್ಯೂ ಕೇಳಿದಳು. “ನಾಳೆ ಬೆಳಿಗ್ಗೆ ಏಳು ಗಂಟೆಗೆ. ಆಗ ನೀನು ನಿದ್ದೆಯಲ್ಲಿರುವೆ.” ಅಂಗಡಿಯವ ಹೇಳಿದ. “ಇಲ್ಲ, ಸರ್. ನಾನು ನೋಡಲು ಖಂಡಿತ ಬರುವೆ.”. ಮರುದಿನ ಮುಂಜಾನೆ ಸ್ಯೂ ಬೇಗನೆ ಎದ್ದು ಅಂಗಡಿ ಕಡೆ ಓಡಿದಳು.

ಅಲ್ಲಿ ಟ್ರಕ್ಕು ನಿಂತಿತ್ತು. ಕಾಲುದಾರಿಯ ಮೇಲೆ ಚೀಲ-ಪೆಟ್ಟಿಗೆಗಳು ಬಿದ್ದಿದ್ದವು. ಅವಳು ನೇರವಾಗಿ ಅಂಗಡಿಗೆ ಬಂದಳು.

ಕೆಲ ಚೀಲಗಳ ಮೇಲೆ “ಆಲೂಗಡ್ಡೆ” ಎಂದು ಬರೆದದ್ದನ್ನು ಸ್ಯೂ ಓದಿದಳು. ಅಷ್ಟರಲ್ಲಿ ತರಕಾರಿ ಮಾರುವವ ಹೊರಗೆ ಬಂದನು.

“ಮತ್ತೇ ಬಂದೆಯಾ?” ಒಡೆಯನ ಮಾತು.

“ನಿಮ್ಮಲ್ಲಿಯ ಆಲೂಗಡ್ಡೆಗಳು ಉಗ್ರಾಣದಿಂದ ಬರುತ್ತವೆ. ನಾನು ಆ ಉಗ್ರಾಣವನ್ನು ನೋಡಬಹುದೇ?”ಆತನು ಅವಳನ್ನು ಒಮ್ಮೆ ದಿಟ್ಟಿಸಿ ನೋಡಿ “ಸರಿ, ಶಕ್ಯವಿದೆ. ಆದರೆ ಅದಕ್ಕಾಗಿ ನಿನಗೆ ನಿನ್ನ ಅಮ್ಮನಿಂದ ಅನುಮತಿ ಪತ್ರ ಪಡೆಯಬೇಕಾಗುವದು.”

“ಎಲ್ಲಿಗೆ ಹೋಗಲಿಕ್ಕೆ?” ಸ್ಯೂ ಕೇಳಿದಳು.

“ಒಳಗೆ ಬಾ. ನಿನಗೆ ಉಗ್ರಾಣದ ವಿಳಾಸ ಕೊಡುವೆ.” ಸ್ಯೂ ಉಗ್ರಾಣದ ವಿಳಾಸದ ಚೀಟಿಯನ್ನು ತಾಯಿಯ ಕೈಯಲ್ಲಿ ಕೊಟ್ಟಳು.

“ನೀನು ಒಬ್ಬಳೇ ಅಲ್ಲಿ ಹೋಗುವದು ಸರಿಯಾಗಲಿಕ್ಕಿಲ್ಲ.” ತಾಯಿ ಹೇಳಿದಳು. “ಆದರೆ ನಿನ್ನ ಇಡೀ ಕ್ಲಾಸ್ ಅಲ್ಲಿಗೆ ಹೋಗಬಹುದು.”

ಆ ದಿನ ಶಾಲೆಗೆ ಹೋದ ಕೂಡಲೇ ಸ್ಯೂ ತನ್ನ ಟೀಚರಳನ್ನು ಕೇಳಿದಳು. “ಮ್ಯಾಡಮ್, ನಮ್ಮ ಕ್ಲಾಸ್ ಉಗ್ರಾಣ ನೋಡಲು ಹೋಗಬಹುದೇ? ” “ಯಾವ ಉಗ್ರಾಣ, ಸ್ಯೂ? ” ಟೀಚರಳ ಪ್ರಶ್ನೆ. “ಇಲ್ಲಿ ನೋಡಿ. ನನ್ನ ತಾಯಿಗೆ ಆಲೂಗಡ್ಡೆಗಳು ಬೇಕಾಗಿದ್ದವು. ನಾನು ಅದನ್ನು ತರಲಿಕ್ಕೆ ತರಕಾರಿ ಅಂಗಡಿಗೆ ಹೋದೆ. ಅಂಗಡಿಯವನು ಒಂದು ಕೇಜಿ ಆಲೂಗಡ್ಡೆ ಕೊಟ್ಟನು.”

“ಆ ಮೇಲೆ ನಾನು ಆಲೂಗಡ್ಡೆಗಳು ಎಲ್ಲಿಂದ ಬರುತ್ತವೆ ಎಂದು ಕೇಳಿದೆ. “ಒಂದು ಟ್ರಕ್ಕು ಉಗ್ರಾಣದಿಂದ ಆಲೂಗಡ್ಡೆಗಳನ್ನು ತರುತ್ತದೆ.”ಎಂದು ಆತ ಹೇಳಿದ. ಇಂದು ಮುಂಜಾನೆ ನಾನು ಅಂಗಡಿಯ ಎದುರಿಗೆ ಟ್ರಕ್ಕನ್ನು ನೋಡಿದೆ. ಆಲೂಗಡ್ಡೆ ತುಂಬಿದ ಚೀಲಗಳನ್ನು ಕೂಡ ನೋಡಿದೆ. ಈಗ ನಾನು ಆ ಉಗ್ರಾಣವನ್ನು ನೋಡಬಯಸುವೆ. ನನ್ನ ತಾಯಿ ಇಡೀ ಕ್ಲಾಸು ತರಕಾರಿ ಉಗ್ರಾಣಕ್ಕೆ ಹೋಗುತ್ತಿದ್ದರೆ ಅವಳ ಅಭ್ಯಂತರವಿಲ್ಲ. ನಾವೆಲ್ಲ ಹೋಗಬಹುದೇ? ಇದು ಆ ಉಗ್ರಾಣದ ವಿಳಾಸ. ”



ಟೀಚರ ಇಡೀ ಕ್ಲಾಸಿಗೆ “ಇದೀಗ ನೀವೆಲ್ಲ ಸ್ಟ್ಯೂ ಹೇಳಿದ ಕತೆಯನ್ನು ಕೇಳಿದಿರಿ, ನಿಮ್ಮಲ್ಲಿ ಎಷ್ಟು ಮಕ್ಕಳಿಗೆ ಉಗ್ರಾಣ ನೋಡುವ ಮನಸ್ಸಿದೆ?” ಎಂದು ಕೇಳಿದಳು. ಎಲ್ಲ ಮಕ್ಕಳು ಕೈ ಮೇಲೆತ್ತಿ ಒಪ್ಪಿಗೆ ಕೊಟ್ಟವು. ಟೀಚರ ಆ ಮೇಲೆ ಉಗ್ರಾಣದ ಮ್ಯಾನೇಜರನಿಗೆ ಪತ್ರ ಬರೆದಳು

ಒಂದು ವಾರ ಏನೂ ಆಗಲಿಲ್ಲ. ಆ ಮೇಲೆ ಒಂದು ದಿನ ಪತ್ರಕ್ಕೆ ಉತ್ತರ ಬಂದಿತು. “ನಿಮ್ಮ ವರ್ಗದ ಮಕ್ಕಳು ಉಗ್ರಾಣ ನೋಡಲಿಕ್ಕೆ 11 ಗಂಟೆಯಿಂದ 12 ಗಂಟೆಯವರೆಗೆ ಯಾವ ಬೇಕಾದ ದಿನ ಬರಬಹುದು.” ಎಂದು ಅದರಲ್ಲಿ ಬರೆದಿತ್ತು. ಹಾಗು ಪತ್ರದ ಕೊನೆಗೆ ಮ್ಯಾನೆಜರ, ಜೆ. ಗ್ರೀನ್ ಎಂದು ಸಹಿ ಕೂಡ ಇತ್ತು.

ಮುಂದಿನ ಸೋಮವಾರದಂದು ಸ್ಯೂ ಮತ್ತು ಅವಳ ವರ್ಗದ ಮಕ್ಕಳೆಲ್ಲ ಉಗ್ರಾಣ ನೋಡಲಿಕ್ಕೆ ಹೊರಟರು. ಮಿಸ್ಟರ್ ಗ್ರೀನ ಅವರನ್ನು ಸ್ವಾಗತಿಸಿದರು. ಮಕ್ಕಳಿಗೆ ಆಲೂಗಡ್ಡೆ ಮತ್ತು ಎಷ್ಟೋ ತರಕಾರಿ ಗಳಿಂದ

ತುಂಬಿದ ಟ್ರಕ್ಕುಗಳನ್ನು ತೋರಿಸಿದರು. “ಈ ಟ್ರಕ್ಕುಗಳು ಎಲ್ಲಿ ಹೋಗುತ್ತವೆ? ” ಮಕ್ಕಳಲ್ಲಿ ಒಬ್ಬಳು ಕೇಳಿದಳು. “ನನಗೆ ಗೊತ್ತು,” ಸ್ಯೂ ಹೇಳತೊಡಗಿದಳು, “ಇವು ಬೇರೆ ಬೇರೆ ಅಂಗಡಿಗಳಿಗೆ ಹೋಗುತ್ತವೆ.” “ಸರಿಯಾದ ಉತ್ತರ.” ಮಿಸ್ಟರ್ ಗ್ರೀನ್ ತಲೆದೂಗಿದರು. “ಈ ಟ್ರಕ್ಕುಗಳು ನಗರದಲ್ಲಿಯ ಅಂಗಡಿಗಳಿಗೆ ತರಕಾರಿಗಳನ್ನು ತಲುಪಿಸುತ್ತವೆ.”



ಆಗ “ಈ ಎಲ್ಲ ತರಕಾರಿಗಳು ರೈಲು, ಟ್ರಕ್ಕು ಮತ್ತು ಟೆಂಪೊ ಮುಂತಾದವುಗಳ ಮುಖಾಂತರ ಈ ಉಗ್ರಾಣಕ್ಕೆ ತಲುಪುತ್ತವೆ. ಅಲ್ಲಿ ನೋಡಿ, ಕೆಲ ಟ್ರಕ್ಕುಗಳಲ್ಲಿ ಆಲೂಗಡ್ಡೆಗಳಿರುವ ಚೀಲಗಳನ್ನು ನೀವು ನೋಡಬಹುದು. ” ಗ್ರೀನ್ ಹೇಳತೊಡಗಿದರು. “ಆದರೆ ಈ ಆಲೂಗಡ್ಡೆಗಳು ಎಲ್ಲಿಂದ ಬರುತ್ತವೆ?” ಸ್ಯೂ ಕೇಳಿದಳು. “ತೋಟಗಳಿಂದ.” ಗ್ರೀನ್ ಉತ್ತರಿಸಿದರು. “ಹಾಗಿದ್ದರೆ ನಾನು ಇವರಿಗೆ ಆಲೂಗಡ್ಡೆ ಬೆಳೆಸುವ ತೋಟವನ್ನು ತೋರಿಸಬಹುದೇ?” ಟೀಚರ ಕೇಳಿದರು.



“ಸರಿ, ತಾವೆಲ್ಲ ಮಿಸ್ಟರ್ ಬಾರ್ಟೋ ಇವರ ತೋಟವನ್ನು ನೋಡಬಹುದು. ಅದು ಇಲ್ಲಿಂದ ಅಷ್ಟು ದೂರವಿಲ್ಲ.” ಗ್ರೀನ್ ಹೇಳಿದರು.

ಮರು ದಿನ ಟೀಚರ ಮಿಸ್ಟರ್ ಬಾರ್ಟೋ ಇವರಿಗೆ ಪತ್ರ ಬರೆದರು. ಮುಂದೆ ಒಂದು ವಾರದ ನಂತರ "ಮಿಸ್ಟರ್ ಬಾರ್ಟೋ ಇವರ ತೋಟವನ್ನು ನೋಡಲು ಮುಂದಿನ ಮಂಗಳವಾರ ಹೋಗುವ." ಎಂದು ಟೀಚರ ಕ್ಲಾಸಿಗೆ ತಿಳಿಸಿದರು.

ಮಂಗಳವಾರದಂದು ಶಾಲೆಯ ಮಕ್ಕಳೆಲ್ಲ ಮಿಸ್ಟರ್ ಬಾರ್ಟೋ ಅವರ ತೋಟಕ್ಕೆ ಹೋದರು. ಅವರು ದಾರಿಯನ್ನೇ ಕಾಯುತ್ತಿದ್ದರು. "ನಮಗೆಲ್ಲರಿಗೂ ನೀವು ಆಲುಗಡ್ಡೆಗಳನ್ನು ಹೇಗೆ ಬೆಳೆಸುತ್ತೀರಿ, ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ." ಎಂದು   ಟೀಚರ ಹೇಳಿದರು.



“ಆಲೂಗಡ್ಡೆಗಳು ಈಗ ನೆಲದ ಕೆಳಗೆ ಇವೆ.” ಮಿಸ್ಟರ್ ಬಾರ್ಟೋ ಹೇಳತೊಡಗಿದರು. “ಅಂದರೆ ನಮಗೆ ಬರಲು ತಡವಾಯಿತೇ?” ಸ್ಯೂ ಕೇಳಿದಳು. “ಹಾಗೇನಿಲ್ಲ. ಆದರೆ ಸಸಿಗಳೆಲ್ಲ ದೊಡ್ಡದಾಗಿವೆ. ಇವುಗಳನ್ನು ನಾನು ಮೇ ತಿಂಗಳಲ್ಲಿ ನೆಟ್ಟಿದ್ದೆ. ಈಗ ಜೂನ ತಿಂಗಳು.” “ಇದರ ಬೀಜಗಳಿರುತ್ತವೆಯೇ?”. ಟೀಚರ ಕೇಳಿದರು. “ಬೀಜಗಳಿರುವದಿಲ್ಲ. ನಾವು ಚಿಕ್ಕ ಚಿಕ್ಕ ಆಲೂಗಡ್ಡೆಗಳನ್ನೇ ನೆಡುತ್ತೇವೆ. ಅವುಗಳಿಗೆ ನಾವು ಬೀಜದ ಗಡ್ಡೆ ಎಂದು ಕರೆಯುತ್ತೇವೆ.” ಬಾರ್ಟೋ ಹೇಳಿದರು.

ಮಿಸ್ಟರ್ ಬಾರ್ಟೋ ತಮ್ಮ ಜೇಬಿನಿಂದ ಒಂದು ಬೀಜಗಡ್ಡೆಯನ್ನು ಹೊರತೆಗೆದರು. ಅದನ್ನು ಮೊದಲು ಎರಡು ತುಂಡುಗಳಲ್ಲಿ, ಮತ್ತೊಮ್ಮೆ ನಾಲ್ಕು ತುಂಡುಗಳಲ್ಲಿ , ಹೀಗೆ ನಾಲ್ಕು ತುಂಡುಗಳನ್ನು ಕೈಯಲ್ಲಿ ಹಿಡಿದು ತೋರಿಸಿದರು.



“ಈ ರೀತಿಯಾಗಿ ನಾವು ಬೀಜಗಡ್ಡೆಗಳನ್ನು ತುಂಡು ಮಾಡುತ್ತೇವೆ. ಪ್ರತಿ ತುಂಡಿನ ಮೇಲೆ ಈ ರೀತಿ ಕಣ್ಣುಗಳು ಇದ್ದದ್ದನ್ನು ಖಚಿತಪಡಿಸಿ ಕತ್ತರಿಸುತ್ತೇವೆ. ಈ ಕಣ್ಣುಗಳೇ ಮುಂದೆ ಸಸಿಯಾಗುತ್ತವೆ.”

“ಈ ಸಸಿಗಳಿಂದ ಹೊಸ ಆಲೂಗಡ್ಡೆಗಳ ಮೊಳಕೆ ಒಡೆಯುತ್ತವೆ.” ಬಾರ್ಟೋ ಹೇಳುತ್ತಿದ್ದರು. “ಅವುಗಳನ್ನು ಹೇಗೆ ನೆಲದಲ್ಲಿ ನೆಡುವಿರಿ?. ನಡೆಯುತ್ತ ಹೋಗುತ್ತಿದ್ದಂತೆ ಚೆಲ್ಲುವಿರಾ?” ಮಕ್ಕಳಲ್ಲಿಯ ಒಬ್ಬಳು ಕೇಳಿದಳು.

“ಇಲ್ಲಮ್ಮ, ನನ್ನ ತೋಟ ಸಾಕಷ್ಟು ದೊಡ್ಡದಿದೆ. ಹಾಗೆ ಮಾಡಲು ಶಕ್ಯವಿಲ್ಲ. ನನ್ನ ಹತ್ತಿರ ಒಂದು ಯಂತ್ರವಿದೆ. ಅದು ಬೀಜ ನೆಡುವ ಕೆಲಸ ಮಾಡುವದು. ”

ಆ ಯಂತ್ರವನ್ನು ತೋರಿಸಲು ಬಾರ್ಟೋ ಎಲ್ಲರನ್ನು ಯಂತ್ರ ಇಟ್ಟಿರುವ ಕೊಟ್ಟಿಗೆಗೆ ಕರೆದುಕೊಂಡು ಹೋದರು. “ಈ ಯಂತ್ರ ಒಂದು ಸಲ ಎರಡು ಸಾಲು ಬೀಜಗಳನ್ನು ನೆಡುತ್ತದೆ. ಇಲ್ಲಿ ನೋಡಿ. ಇವು ಎರಡು ಸಲಿಕೆಗಳು ಭೂಮಿಯನ್ನು ಎರಡು ಸಾಲುಗಳಲ್ಲಿ ಅಗೆಯುತ್ತವೆ. ”

ಆ ಮೇಲೆ ಯಂತ್ರದ ಹಿಂದಿರುವ ಕಬ್ಬಿಣದ ಪೆಟ್ಟಿಗೆಗಳನ್ನು ತೋರಿಸಿದರು. “ಇಲ್ಲಿ ಎರಡು ಗಾಲಿಗಳಿವೆ. ಒಂದು ಗಾಲಿಯ ಹಲ್ಲುಗಳಂತಹ ಮೊಳೆಗಳು ಒಂದೊಂದಾಗಿ ಆಲೂಗಡ್ಡೆಯ ತುಂಡುಗಳನ್ನು ತೋಟದ ನೆಲದ ಮೇಲೆ ಒಗೆಯುತ್ತವೆ. ಮತ್ತು ಇನ್ನೊಂದು ಗಾಲಿಯ ಮೇಲಿನ ಸಲಿಕೆಯಂತಹ ಮೊಳೆಗಳು ನೆಲದ ಮೇಲೆ ಬಿದ್ದ ಆಲೂಗಡ್ಡೆಯ ತುಂಡಿನ ಮೇಲೆ ಮಣ್ಣನ್ನು ನೂಕಿ ಮುಚ್ಚುತ್ತವೆ. ”



“ನಿಮಗೆ ಆಲೂಗಡ್ಡೆಯ ಬೆಳೆ ಹೇಗೆ ಕಾಣುತ್ತದೆ ಎಂಬುದನ್ನು ನೋಡಬೇಕಾಗಿದೆಯೇ? ” ಮಿಸ್ಟರ್ ಬಾರ್ಟೋ ಕೇಳಿದರು. “ಹಾಗಿದ್ದರೆ ನನ್ನ ಜತೆ ಬನ್ನಿ,”

ಪೂರ್ಣ ಕ್ಲಾಸು ಬಾರ್ಟೋ ಅವರನ್ನು ಹಿಂಬಾಲಿಸಿ ಅವರ ತೋಟಕ್ಕೆ ಬಂದಿತು. ಎಲ್ಲಿ ನೋಡಿದಲ್ಲಿ ಹಚ್ಚು ಹಸುರಾದ ಸಸ್ಯಗಳ ಸಾಲುಗಳಿದ್ದವು..

ಸಸ್ಯಗಳ ಮೇಲೆ ಬಿಳಿ ಹೂಗಳು ಅರಳಿದ್ದವು. “ಎಲ್ಲೆಡೆ ಸಸ್ಯಗಳೇ ಕಾಣುತ್ತವೆ. ಆಲೂಗಡ್ಡೆಗಳೆಲ್ಲಿ?” ಸ್ಯೂ ಕೇಳಿದಳು.

ಮಿಸ್ಟರ್ ಬಾರ್ಟೋ ಒಂದು ಸಲಿಕೆಯಿಂದ ಸಸ್ಯದ ಕೆಳಗೆ ಅಗೆದು ಸಸ್ಯವನ್ನು ಹೊರತೆಗೆದರು. “ಆಲೂಗಡ್ಡೆಗಳನ್ನು ಹುಡುಕಿ” ಎಂದ್ಹೇಳಿದರು. ಎಲ್ಲರೂ ನೋಡಿದರು. ಸ್ಯೂ ಕೂಡ ನೋಡಿದಳು. ಎಲ್ಲ ಆಲೂಗಡ್ಡೆಗಳು ಬಹು ಚಿಕ್ಕವಾಗಿದ್ದವು. ಆದರೂ ಅವು ಆಲೂಗಡ್ಡೆಗಳೇ ನಿಶ್ಚಿತ.

ಆಲೂಗಡ್ಡೆಗಳು ಸಸ್ಯದ ನೆಲದಲ್ಲಿ
ಮುಚ್ಚಿದ ಬದಿಯಲ್ಲಿಯಷ್ಟೇ ಇದ್ದವು.
“ಎಷ್ಟು ಸಣ್ಣದಿವೆ.” ಸ್ಯೂ ಹೇಳಿದಳು.
“ಬಿಸಿಲಿನಲ್ಲಿ ಅವು ಸಾಕಷ್ಟು
ದೊಡ್ಡದಾಗುತ್ತವೆ.
ಬೇಕಿದ್ದರೆ ನಾವು ಹಚ್ಚಿದ ಬೀಜಗಡ್ಡೆಗಳನ್ನು
ಕೂಡ ನೋಡಬಹುದು.” ಬಾರ್ಟೋ
ಹೇಳತೊಡಗಿದರು.

"ಆಲೂಗಡ್ಡೆಗಳು ಪೂರ್ಣವಾಗಿ ದೊಡ್ಡದಾದ ಮೇಲೆ ಅವುಗಳನ್ನು ನೆಲದಿಂದ ಯಾರು ಹೊರತೆಗೆಯುವರು?" ಮಕ್ಕಳಲ್ಲಿ ಒಬ್ಬರು ಕೇಳಿದರು. "ಈ ಮೊದಲು ಒಕ್ಕಲಿಗರೇ ಕೈಯಿಂದ ಅಗೆದು ತೆಗೆಯುತ್ತಿದ್ದರು. ಆದರೆ ಈಗೀಗ ಇವುಗಳನ್ನು ಅಗೆದು ತೆಗೆಯುವ ಯಂತ್ರಗಳು ಬಂದಿವೆ. ಸಪ್ಟೆಂಬರದಲ್ಲಿ ನನ್ನ ಯಂತ್ರ ಬರುತ್ತಲಿದೆ. " ಬಾರ್ಟೋ ಉತ್ತರಿಸಿದರು.

"ನಾವು ಅದನ್ನು ನೋಡಬಹುದೇ?" ಟೀಚರ ಕೇಳಿದರು. "ಆಗ ನನಗೆ ಬಿಡುವು ಇರಲಾರದು." ಮಿಸ್ಟರ್ ಬಾರ್ಟೋ ಹೇಳಿದರು. "ಆದರೆ ತಾವು ಬಂದು ನೋಡಬಹುದು. ಅಗೆಯುವ ದಿನ ನಾನು ನಿಮಗೆ ತಿಳಿಸುತ್ತೇನೆ."

ಮನೆಗೆ ಮರಳಿ ಹೋಗುವಾಗ ಸ್ಯೂ ತನ್ನ ಟೀಚರಳನ್ನು ಕೇಳಿದಳು, “ಆಲೂಗಡ್ಡೆಯ ಆ ತುಂಡುಗಳಿಂದ ಹೊಸ ಮೊಳಕೆ ಹೇಗೆ ಹೊರಬರುತ್ತದೆ?”

“ಗಡ್ಡೆಯ ಕಣ್ಣುಗಳಿಂದ ಸಸಿಯು ವಿಕಸಿತವಾಗುವದು. ಮನೆಗೆ ಹೋದ ಮೇಲೆ ತಾಯಿಯ ಸಲುವಾಗಿ ತಂದ ಆಲೂಗಡ್ಡೆಗಳನ್ನು ಸರಿಯಾಗಿ ನಿರೀಕ್ಷಿಸು.” ಟೀಚರ ಹೇಳಿದಳು.

ಮನೆ ಮುಟ್ಟಿದ ತತ್ಕ್ಷಣ ಸ್ಯೂ ಅಡಿಗೆ ಮನೆಗೆ ಓಡಿದಳು. ಹಾಗು ಚೀಲದಲ್ಲಿ ಹಣಿಕೆ ಹಾಕಿದಳು.

“ನೋಡಮ್ಮ, ಈ ಆಲುಗಡ್ಡೆಗಳು
ನೆಡಲಾರದೇನೆ ಬೆಳೆಯುತ್ತಲಿವೆ”.
ಸ್ಯೂ ತಾಯಿಗೆ ಹೇಳಿದಳು.

“ಇವು ತಮ್ಮ ಕಣ್ಣುಗಳಿಂದ ಬೆಳೆಯುತ್ತವೆ. ”
ತಾಯಿಗೆ ನಾಲ್ಕು ತುಂಡುಗಳನ್ನು ಮಾಡಲು
ಹೇಳಿದಳು. “ಇಂತಹ ತುಂಡುಗಳನ್ನೇ
ಒಕ್ಕಲಿಗನು ನೆಡುತ್ತಾನೆ.”
ಸಪ್ಟೆಂಬರದಲ್ಲಿ ಮತ್ತೇ ಶಾಲೆಗೆ ಹೋದಾಗ
ಟೀಚರ ಬದಲಿಯಾಗಿರಲಿಲ್ಲ. ಮತ್ತು
ಸಂಗಡಿಗರೂ ಕೂಡ ಬೇರೆ ಸ್ಕೂಲಿಗೆ
ಹೋಗಿರಲಿಲ್ಲ. ಸ್ಯೂಗೆ ಬಹು
ಸಂತಸವಾಯಿತು. ? “ಮಿಸ್ಟರ್ ಬಾರ್ಟೋ
ಅವರ ತೋಟಕ್ಕೆ ಎಂದು ಹೋಗುವ,? ”
ಅವಳು ಕೇಳಿದಳು.

“ಮಿಸ್ಟರ್ ಬಾರ್ಟೋ ನನಗಾಗಿ ಒಂದು ಚೀಟಿ ಕಳಿಸಿಕೊಟ್ಟಿದ್ದಾರೆ. ಮುಂದಿನ ಬುಧವಾರ ನಾವು ಅವರ ತೋಟಕ್ಕೆ ಹೋಗಬಹುದು.” ಟೀಚರ ಹೇಳಿದರು. ಬುಧವಾರ ವರ್ಗದ ಎಲ್ಲ ಮಕ್ಕಳು ತೋಟಕ್ಕೆ ಹೋದರು. ಅಲ್ಲಿ ಒಂದು ದೊಡ್ಡ ಟ್ರಕ್ಕು ನಿಂತಿತ್ತು. ಅದರ ಪಕ್ಕದಲ್ಲಿದ್ದ ಟ್ರ್ಯಾಕ್ಟರ ಒಂದು ದೊಡ್ಡ ಯಂತ್ರವನ್ನು ಎಳೆಯುತ್ತಿತ್ತು. “ಏನಿದು? ಎಲ್ಲ ಸಸ್ಯಗಳು ಸತ್ತ ಹಾಗೆ ಬಿದ್ದಿವೆ.” ಎಂದು ಒಬ್ಬ ಒದರುತ್ತ ಹೇಳಿದ.



“ಸರಿ ಹೇಳಿದೆ. ಇವೆಲ್ಲ ಕಂದು ಬಣ್ಣದ ಹಾಗು ಸತ್ತಂತೆ ಕಾಣುತ್ತವೆ. ಮಕ್ಕಳೆಲ್ಲ ಹೀಗೆ ಏಕೆ ಆಯಿತು ಎಂದು ಕೇಳುತ್ತಲಿವೆ,” ಎಂದು ಟೀಚರ ಬಾರ್ಟೋನಿಗೆ ಕೇಳಿದರು. “ಅಗೆಯುವ ಮೊದಲು ಸಸ್ಯಗಳು ಹೀಗೆಯೇ ಕಂದು ಬಣ್ಣದ್ದಾಗಿ ಕಾಣಬೇಕು. ಸಸ್ಯಗಳು ಹೀಗೆ ಸತ್ತಂತೆ ಕಂಡಾಗ ಆಲೂಗಡ್ಡೆಗಳನ್ನು ನೆಲದಿಂದ ಕಿತ್ತುವ ಸಮಯ ಬಂದಿದೆ ಎಂಬುದು ತಿಳಿದು ಬರುಯುವದು. ”

"ಒಂದೇ ಬದಿಗೆ ಸರಿದು ನಿಲ್ಲಿ." ಟೀಚರ ಮತ್ತು ಎಲ್ಲ ಮಕ್ಕಳು ದೂರ ಸರಿದು ನಂತರು. ಮಿಸ್ಟರ್ ಬಾರ್ಟೋ ಟ್ರಾಕ್ಟರನ್ನು ಶುರು ಮಾಡಿದರು. ಅದು ಆ ದೊಡ್ಡ ಯಂತ್ರವನ್ನು ಎಳೆಯತೊಡಗಿತು. ಮಿಸ್ಟರ್ ಬಾರ್ಟೋ ಅವರ ಪತ್ನಿ ಟ್ರಕ್ಕನ್ನು ಯಂತ್ರದ ಜತೆ ಸಮನಾಗಿ ಚಲಿಸುವ ಹಾಗೆ ನಡೆಯಿಸತೊಡಗಿದಳು. ಆ ದೊಡ್ಡ ಯಂತ್ರವು ಆಲೂಗಡ್ಡೆಗಳಿರುವ ಎರಡೂ ಸಾಲುಗಳನ್ನು ಅಗಿಯತೊಡಗಿತು. ಆಲೂಗಡ್ಡೆಗಳು ಚೇನು ಇರುವ ಪಟ್ಟಿಯ ಮೇಲೆ ಬೀಳತೊಡಗಿದವು. ಮಣ್ಣು ಮತ್ತು ಮೃತವಾದ ಮೇಲಿನ ತಪ್ಪಲು ಮೆಲಿಂದ ಮೇಲೆ ಬೀಳತೊಡಗಿದವು.

ಆದರೆ ಆಲೂಗಡ್ಡೆ ಪಟ್ಟಿಯಮೇಲೆ ಇದ್ದವು.
ಆಮೇಲೆ ಅವು ಟ್ರಕ್ಕಿನಲ್ಲಿ ಬೀಳತೊಡಗಿದವು

ಕೆಲ ಸಮಯದ ನಂತರ ಮಿಸೆಸ್ ಬಾರ್ಟೋ ಟ್ರಕ್ಕನ್ನು ನಿಲ್ಲಿಸಿದರು. ಮಿಸ್ಟರ್ ಬಾರ್ಟೋ ಟ್ರಾಕ್ಟರಿನಿಂದ ಕೆಳಗಿಳಿದರು. ಸ್ಯೂನ ಮುಂದೆ ಕರೆದು ಒಂದು ಸಸ್ಯವನ್ನು ಅಗೆಯಲು ಹೇಳಿದರು. ನಾಲ್ಕು ಬದಿಯಿಂದ ಅಗೆಯುವಾಗ ಸ್ಯೂಗೆ ಸಹಾಯ ಮಾಡಿದರು.

ಅಗೆಯುವ ಕೆಲಸ ಮುಗಿದಾಗ ಹತ್ತು - ಹನ್ನೆರಡು ದೊಡ್ಡ ದೊಡ್ಡ ಆಲೂಗಡ್ಡೆಗಳು ನೆಲದ ಮೇಲೆ ಬಿದ್ದವು.

ಮೂರು ತಿಂಗಳ ಹಿಂದೆ ಬಂದಾಗ ಚಿಕ್ಕ ಚಿಕ್ಕ ಗಡ್ಡೆಗಳು ಇದ್ದವು. ಈಗ ಅವುಗಳ ಗಾತ್ರ ದೊಡ್ಡದಾಗಿತ್ತು. “ನನ್ನ ಟ್ರಕ್ಕಿನಲ್ಲಿ ಸ್ಥಳವಿಲ್ಲ. ನೀವು ನನ್ನ ಹಿಂದೆ ಉಗ್ರಾಣಕ್ಕೆ ಬನ್ನಿ.” ಬಾರ್ಟೋ ಹೇಳಿದರು. ."ಇನ್ನೊಂದು ಉಗ್ರಾಣವೇ!" ಸ್ಯೂಗೆ ಅಚ್ಚರಿಯಾಯಿತು. ಒಕ್ಕಲಿಗ ಟ್ರಕ್ಕಿನಲ್ಲಿ ಕುಳಿತ. ಮಕ್ಕಳು ಮತ್ತು ಟೀಚರ ತಮ್ಮ ಬಸ್ಸಿನಲ್ಲಿ ಕುಳಿತು ಉಗ್ರಾಣಕ್ಕೆ ಬಂದರು. ಒಂದು ದೊಡ್ಡ ಬಿಲ್ಡಿಂಗಿನ ಎದುರು ಬಸ್ಸು ನಿಂತಿತು. ."ಎಲ್ಲ ಮಕ್ಕಳನ್ನು ಒಳಗೆ ತನ್ನಿ. " ಬಾರ್ಟೋ ಟೀಚರಳಿಗೆ ಹೇಳಿದರು.



ಟ್ರಕ್ಕಿನ ಮಗ್ಗಲಲ್ಲಿ ಇರುವ ಚಿಕ್ಕ ಬಾಗಿಲನ್ನು ತೆರೆದಿದ್ದನ್ನು ಮಕ್ಕಳು ನೋಡಿದರು. ಆಲೂಗಡ್ಡೆಗಳು ಒಂದು ಚಲಿಸುವ ಪಟ್ಟಿಯ ಮೇಲಿಂದ ಬೀಳತೊಡಗಿದ್ದವು.



ಇನ್ನೊಂದು ಯಂತ್ರವು ಆವುಗಳನ್ನು ತೊಳೆದು ಒಣಗಿಸತೊಡಗಿತು.

ಆ ಮೇಲೆ ಅವು ಬೇರೊಂದು ಪಟ್ಟಿಯ ಮೇಲೆ ಬೀಳತೊಡಗಿದವು. ಕೊನೆಯಲ್ಲಿ ಅವು ಚೀಲಗಳಲ್ಲಿ ಶೇಖರಿಸತೊಡಗಿದವು. "ಈ ಚೀಲಗಳು ಎಲ್ಲಿಗೆ ಹೋಗುವವು? ” ಟೀಚರ ಕೇಳಿದರು. “ಅವು ಎಲ್ಲಿಗೆ ಹೋಗುತ್ತವೆ ಎಂಬುದು ನನಗೆ ಗೊತ್ತು,” ಸ್ಯೂ ಹೇಳತೊಡಗಿದಳು,

“ಇಲ್ಲಿಂದ ಇವು ಇನ್ನೊಂದು

ಉಗ್ರಾಣಕ್ಕೆ ಹೋಗುವವು. ಮತ್ತು

ಅಲ್ಲಿಂದ ಬೇರೆ ಬೇರೆ ಅಂಗಡಿಗಳಲ್ಲಿ,

ಮತ್ತು ಅಲ್ಲಿಂದ ಮನೆ ಮನೆಗೆ!”

ಮುಕ್ತಾಯ